Date : 03.03.2026

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಂದುವರಿದ ಮುಖ್ಯ ವಿಚಾರಣೆ – ಅರ್ಜಿದಾರರ ಪರ ಶ್ರೀ ಕೆ.ಹೆಚ್.ಎಲ್. ವಕೀಲರಿಂದ –**

ನಾನು ಈ ಕೇಸಿನಲ್ಲಿ 4 ನೇ ಅರ್ಜಿದಾರನಿದ್ದು, ಅರ್ಜಿದಾರ–1 ರಿಂದ 3 ಇವರು ಕ್ರಮವಾಗಿ ನನ್ನ ತಾಯಿ, ಸಹೋದರ ಮತ್ತು ಸಹೋದರಿ ಇದ್ದು, ಅದೇ ರೀತಿ ಅರ್ಜಿದಾರ–5 ರಿಂದ 7 ಇವರು ನನ್ನ ಸಹೋದರಿಯರಿದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳನ್ನು ಸರಿಯಿರುತ್ತವೆ.

ನನ್ನ ಸಾಕ್ಷಿಗೆ ಬೆಂಬಲಿತವಾಗಿ, ಗುಡ್ಡದಹಳ್ಳಿ ಗ್ರಾಮದ ಸರ್ವೆ ನಂ. 59/1 ರಿಂದ 59/4 ರ ಆಸ್ತಿಯ ಬಗ್ಗೆ ಇರುವ 4 ಪಹಣಿ ಪ್ರತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ–1 ರಿಂದ 4 ಎಂದು, ಸರ್ವೆ ನಂ. 59/3 ಆಸ್ತಿಯಲ್ಲಿ ಎದುರುದಾರರು ವಿದ್ಯುತ್ ಪವರ್ ಲೈನನ್ನು ಎಳೆದ ಬಗ್ಗೆ ನಮಗೆ ಪರಿಹಾರವೆಂದು ಹಣ ನೀಡಿದ್ದು, ಆ ಬಗ್ಗೆ ತೋರಿಸಲು ಇರುವ 2 ಬಿಲ್ ನ ನಕಲು ಪ್ರತಿ ಮತ್ತು 2 ಚೆಕ್ ಗಳ ನಕಲು ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–5 ರಿಂದ 8 ಎಂದು, 2023–24 ನೇ ಸಾಲಿನಲ್ಲಿ ಮೊಳಕಾಲ್ಮೂರು ಉಪನೊಂದಣಾಧಿಕಾರಿ ಕಛೇರಿ ವ್ಯಾಪ್ತಿಯ ಜಮೀನುಗಳ ಮಾರ್ಗಸೂಚಿ ದರಪಟ್ಟಿಯ ಬಗ್ಗೆ ಇರುವ ಒಂದು ದಾಖಲೆಯ ನಕಲು ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅದನ್ನು ನಿಪಿ–9 ಎಂದು ಗುರುತಿಸಲಾಯಿತು.

ಮೇಲಿನ ನನ್ನ ಸಾಕ್ಷಿಯನ್ನು ಪರಿಗಣಿಸಿ ಅರ್ಜಿಯಲ್ಲಿ ಕೋರಿದಂತೆ ಎದುರುದಾರರ ವಿರುದ್ಧ ಆದೇಶ ಮಾಡಲು ಕೋರುತ್ತೇನೆ.

**– ಪಾಟೀ ಸವಾಲು – ಎದುರುದಾರರ ಪರ ಶ್ರೀ ಎಂ.ಬಿ.ಆರ್. ವಕೀಲರಿಂದ –**

ಅರ್ಜಿಯಲ್ಲಿ ಕಾಣಿಸಿದ ನಮ್ಮ ಮಾಲೀಕತ್ವದ ಜಮೀನುಗಳು ಖುಷ್ಕಿ ಜಮೀನುಗಳು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುವುದೇನೆಂದರೆ ಅವುಗಳು ಕೊಳವೆ ಬಾವಿ ಆಧಾರಿತ ನೀರಾವರಿ ಜಮೀನುಗಳು ಇರುವುದೆಂದು ಹೇಳುತ್ತಾರೆ. ಅರ್ಜಿಯಲ್ಲಿ ಕಾಣಿಸಿದ ಜಮೀನುಗಳಲ್ಲಿ ಎದುರುದಾರರು ವಿದ್ಯುತ್ ಲೈನ್ ಎಳೆಯುವ ಸಮಯದಲ್ಲಿ ಆ ಜಮೀನುಗಳಲ್ಲಿ ಯಾವ ಬೆಳೆಯೂ ಇರಲಿಲ್ಲವೆಂದು ಸೂಚಿಸಲಾಗಿ, ಸೂಚನೆ ಸರಿಯಲ್ಲಿ, ಆ ವೇಳೆಗೆ ಆ ಜಮೀನುಗಳಲ್ಲಿ ಹತ್ತಿ ಬೆಳೆ ಇತ್ತೆಂದು ಸಾಕ್ಷಿ ಹೇಳುತ್ತಾರೆ. ಎದುರುದಾರರು ಅರ್ಜಿಯಲ್ಲಿ ಕಾಣಿಸಿದ ಜಮೀನಿನಲ್ಲಿ ವಿದ್ಯುತ್ ಲೈನ್ ಎಳೆಯುವ ಸಮಯದಲ್ಲಿ ನೀವು ಆ ಜಮೀನಿನಲ್ಲಿ ಯಾವ ಬೆಳೆಯನ್ನು ಬೆಳೆಯುತ್ತಿದ್ದಿರೋ ಈಗಲೂ ಕೂಡ ಅದೇ ರೀತಿ ನೀವು ಆ

ಬೆಳೆಯನ್ನು ಆ ಜಮೀನುಗಳಲ್ಲಿ ಬೆಳೆಯುತ್ತಿರುವಿರೆಂದು ಸೂಚಿಸಲಾಗಿ, ಹೌದು, ಆದರೆ ವಿದ್ಯುತ್ ಟವರ್ ನ ಕೆಳಭಾಗದಲ್ಲಿ ಯಾವುದೇ ಬೆಳೆ ಬೆಳೆಯಲು ಆಗುತ್ತಿಲ್ಲವೆಂದು ಸಾಕ್ಷಿ ಹೇಳುತ್ತಾರೆ.

2. ಮುಖ್ಯವಿಚಾರಣೆಯ ಪುಟ–4 ರಲ್ಲಿ ಅರ್ಜಿಯಲ್ಲಿ ಕಾಣಿಸಿದ ಜಮೀನುಗಳಲ್ಲಿ ಎದುರುದಾರರು ವಿದ್ಯುತ್ ಹೈಟೆನ್ಷನ್ ವೈರ್ ಎಳೆಯುವ ಕಾಲಕ್ಕೆ ಆ ಜಮೀನಿನಲ್ಲಿ ಹತ್ತಿ ಬೆಳೆ ಮತ್ತು ಮೆಣಸಿನ ಗಿಡಗಳಿದ್ದು, ಆ ಸಮಯದಲ್ಲಿ ಅವರು ಟ್ರ್ಯಾಕ್ಟರ್, ಲಾರಿ ಮತ್ತು ಕೆಲಸಗಾರರು ಆ ಜಮೀನುಗಳಲ್ಲಿ ಓಡಾಡಿದ ಕಾರಣ ಆ ಬೆಳೆ ನಾಶವಾಗಿ, ಅದರಿಂದ ಒಂದು ಎಕರೆ ಹತ್ತಿ ಬೆಳೆಯಿಂದ ಮತ್ತು ಮೆಣಸಿನ ಗಿಡಗಳಿಂದ ನನಗೆ ವಾರ್ಷಿಕ ರೂ. 2,00,000/– ನಷ್ಟವಾಗಿರುವುದೆಂದು ಕಾಣಿಸಿದ್ದು, ಅದಕ್ಕೆ ಸಂಬಂಧಿಸಿದಂತೆ ನಾನೇನು ನ್ಯಾಯಾಲಯಕ್ಕೆ ದಾಖಲೆ ಹಾಕಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಮುಖ್ಯವಿಚಾರಣೆಯ ಪುಟ–3 ರಲ್ಲಿ ಅರ್ಜಿಯಲ್ಲಿ ಕಾಣಿಸಿದ ಆಸ್ತಿಯ ಬೆಲೆಯು 1 ಎಕರೆಗೆ ರೂ.10,00,000/– ಇತ್ತೆಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ ವೆಂದರೆ ಸರಿಯಲ್ಲ. ದಿಃ 27.09.2022 ರಂದು ಚಿತ್ರದುರ್ಗ ಜಿಲ್ಲಾಧಿಕಾರಿಗಳು ಹೊರಡಿಸಿದ ಆದೇಶಕ್ಕೆ ಅನುಗುಣವಾಗಿ ಎದುರುದಾರರು ನಮ್ಮ ಮಾಲೀಕತ್ವದ ಜಮೀನಿನಲ್ಲಿ ವಿದ್ಯುತ್ ಲೈನನ್ನು ಎಳೆದ ಬಾಬ್ತು ನಿಮಗೆ ಈಗಾಗಲೇ ಸೂಕ್ತ ಪರಿಹಾರವೆಂದು ರೂ.1,40,104/– ಹಣ ನೀಡಿರುವರು ಎಂದು ಸೂಚಿಸಲಾಗಿ, ಹೌದು, ನೀಡಿರುತ್ತಾರೆ, ಆದರೆ ಆ ಪರಿಹಾರವನ್ನು ಬೆಳೆ ನಷ್ಟಕ್ಕೆಂದು ಹೇಳಿ ಕೊಟ್ಟಿರುವರೆಂದು ಸಾಕ್ಷಿ ಹೇಳುತ್ತಾರೆ.

3. ಅರ್ಜಿಯಲ್ಲಿ ಕಾಣಿಸಿದ ಜಮೀನಿನಲ್ಲಿ ಎದುರುದಾರರು ವಿದ್ಯುತ್ ಲೈನ್ ಎಳೆದ ಬಾಬ್ತು ಭೂನಷ್ಟ ಪರಿಹಾರವೆಂದು ನಿಮಗೆ ಈಗಾಗಲೇ ರೂ. 1,40,104/– ಹಣ ಮತ್ತು ಜಮೀನಿನಲ್ಲಿ ಟವರ್ ನಿರ್ಮಾಣ ಮಾಡಿದ ಕಾರಣ ಪರಿಹಾರವೆಂದು, ರೂ. 1,34,670/– ಮತ್ತು ಬೋರ್ ವೆಲ್ ನಾಶವೆಂದು ರೂ. 63,000/– ಹಣ ಪಾವತಿಸಿರುವರು ಎಂದು ಸೂಚಿಸಲಾಗಿ, ಹೌದು, ಆದರೆ ನಾವು ಆ ಹಣವನ್ನು ತಕರಾರಿಗೆ ಒಳಪಟ್ಟು ಪಡೆದಿರುವೆನೆಂದು ಸಾಕ್ಷಿ ಹೇಳುತ್ತಾರೆ. ಮುಂದುವರಿದು ಸಾಕ್ಷಿ ಹೇಳುವುದೇನೆಂದರೆ ಸದರಿ ಮೇಲೆ ಹೇಳಿದ ಪರಿಹಾರವನ್ನು ಮೇಲೆ ಹೇಳಿದ ಉದ್ದೇಶಕ್ಕಾಗಿ ನೀಡಲಾಗಿದೆ ಎಂದು ಪರಿಹಾರವು ನಮಗೆ ವಿವರವಾಗಿ ಹೇಳಿಲ್ಲವೆಂದು ಮತ್ತು ಎದುರುದಾರರು ಇನ್ನು ನಮಗೆ ಪರಿಹಾರ ಕೊಡುವುದು ಬಾಕಿ ಇರುವುದೆಂದು ಸಾಕ್ಷಿ ಹೇಳುತ್ತಾರೆ. ಸದರಿ ಜಮೀನಿನಲ್ಲಿ ಎದುರುದಾರರು ವಿದ್ಯುತ್ ಟವರ್ ಹಾಕಿ ಲೈನ್ ಎಳೆಯುವ ಸಮಯದಲ್ಲಿ ಆ ಜಮೀನುಗಳಲ್ಲಿ ಯಾವುದೇ ಬೆಳೆಯ ಇರದೇ ಇದ್ದು, ಆ ಕಾರಣ ಬೆಳೆ ನಷ್ಟ ಎಂದು ಎದುರುದಾರರು ನಿಮಗೆ ಪರಿಹಾರ ಕೊಟ್ಟಿಲ್ಲವೆಂದು ಸೂಚಿಸಲಾಗಿ, ಸೂಚನೆ ಸರಿಯಲ್ಲ, ಆ ಸಮಯದಲ್ಲಿ ಆ ಜಮೀನುಗಳಲ್ಲಿ ಹತ್ತಿ ಬೆಳೆ ಮತ್ತು ಮೆಣಸಿನ ಗಿಡ

ಇದ್ದು, ಆದರೂ ಕೂಡ ಅವುಗಳ ನಷ್ಟದ ಬಾಬ್ತು ನಮಗೆ ಎದುರುದಾರರು ಈ ವರೆವಿಗೂ ಪರಿಹಾರವನ್ನು ಕೊಟ್ಟಿಲ್ಲವೆಂದು ಸಾಕ್ಷಿ ಹೇಳುತ್ತಾರೆ.

4. ಮೇಲೆ ಹೇಳಿದ ಎಲ್ಲಾ ಪರಿಹಾರವನ್ನು ನಾವು ಎದುರುದಾರರಿಂದ ಒಪ್ಪಿ ಪಡೆದುಕೊಂಡಿರುವೆನು ಎಂದರೆ ಸರಿಯಲ್ಲ. ಈ ಮೇಲೆ ಹೇಳಿದಂತೆ ಎದುರುದಾರರು ನಮಗೆ ನೀಡಿದ ಪರಿಹಾರವು ಕಾನೂನು ಬದ್ಧವಾಗಿ ಇದ್ದು ಮತ್ತು ಅದು ಅಂತಿಮ ಪರಿಹಾರ ಇರುವುದು ಎಂದರೆ ಸರಿಯಲ್ಲ. ಎದುರುದಾರರು ಈ ಮೇಲೆ ಹೇಳಿದಂತೆ ನಮಗೆ ನೀಡಿದ ಪರಿಹಾರವು ಕಾನೂನು ಬದ್ಧವಾಗಿ ಸೂಕ್ತವಿದ್ದು, ಅದರಿಂದ ಅರ್ಜಿಯಲ್ಲಿ ಕೋರಿದಂತೆ ಎದುರುದಾರರು ನಮಗೆ ಎಷ್ಟು ಕೂಡ ಪರಿಹಾರ ಕೊಡಲು ಬಾಧ್ಯರು ಇರುವುದಿಲ್ಲ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದಂತೆ ಎದುರುದಾರರು ನಮಗೆ ನೀಡಿದ ಪರಿಹಾರವು ಸೂಕ್ತ ಇದ್ದು ಮತ್ತು ಅದನ್ನು ನಾವು ಒಪ್ಪಿ ಪಡೆದಿದ್ದು, ಆದರೂ ಕೂಡ ಈಗ ಎದುರುದಾರರಿಂದ ದುರ್ಲಾಭ ಪಡೆಯುವ ಉದ್ದೇಶದಿಂದ ನ್ಯಾಯಾಲಯಕ್ಕೆ ಸುಳ್ಳು ಅರ್ಜಿ ಸಲ್ಲಿಸಿ, ಸುಳ್ಳು ಅಂಶದ ಮುಖ್ಯವಿಚಾರಣೆ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿರುವೆನು ಎಂದರೆ ಸರಿಯಲ್ಲ.

ಮರು ವಿಚಾರಣೆ – ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.